ಕರ್ನಾಟಕ ವಿಧಾನಸಭೆ

ಮಂಗಳವಾರ 24ನೇ ಡಿಸೆಂಬರ್ 2002ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11-00 ಗಂಟೆ ಸಮಾವೇಶಗೊಂಡಿತು.

ಅಧ್ಯಕ್ಷರು (ಎಂ.ವಿ. ವೆಂಕಟಪ್ಪ) ರವರು ಪೀಠವನ್ನು ಅಲಂಕರಿಸಿದ್ದರು.

(1) ಧರಣಿ ಹೆಚ್. ನಾಗಪ್ಪನವರ ಹತ್ಯೆ ಕುರಿತು ಸಿ.ಬಿ.ಐ.ಗೆ ಒಪ್ಪಿಸುವಂತೆ ಹಾಗೂ ಕಾಂಗ್ರೆಸ್ ಸರ್ಕಾರ ರಾಜೀನಾಮೆ ಒತ್ತಾಯಿಸಿ ಬಿ.ಜೆ.ಪಿ. ಸದಸ್ಯರಿಂದ ಧರಣಿ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) ಜನ ವಿರೋಧಿ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ, ಬಗರ್ ಹುಕುಂ ಸಾಗುವಳಿದಾರರಿಗೆ ಒಕ್ಕಲಿಬ್ಬಿಸುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ, ವಿದ್ಯುತ್ ಕ್ಷಾಮ ತಂದ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ.

(2) ಧರಣಿ ಹೆಚ್ ನಾಗಪ್ಪನವರ ಅಪಹರಣ ಮತ್ತು ದುರಂತ ಸಾವಿನ ಬಗ್ಗೆ.

(ಮಾನ್ಯ ಸದಸ್ಯರಾದ ಶ್ರೀ ಸಿ. ಗುರುಸ್ವಾಮಿಯವರು ಸದನದ ಬಾವಿಯಲ್ಲಿ ಧರಣಿ ಪ್ರಾರಂಭಿಸಿದರು.

(3) ನಿಲುವಳಿ ಸೂಚನೆ ಮಂಡನೆಗೆ ಒತ್ತಾಯ

ವಿಷಯ : ಹೆಚ್. ನಾಗಪ್ಪನವರ ಅಪಹರಣ ಹಾಗೂ ಅವರ ದುರಂತ ಸಾವಿನ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಇಲ್ಲಿ ಚರ್ಚೆ ಮಾಡುವುದು ಏನಿದೆ? ನಾಗಪ್ಪನವರ ಹತ್ಯೆ ಮಾಡಿದ ಸರ್ಕಾರ ಇದು. ನಾಗಪ್ಪನವರ ರಕ್ಷಣೆ ಮಾಡದೆ ಇದ್ದ ಸರ್ಕಾರ, ಇವರ ಜೊತೆ ನಾವು ಮಾತನಾಡುವುದಿಲ್ಲ. ಅಪರಾಧಿ ಸ್ಥಾನದಲ್ಲಿರುವ ಸರ್ಕಾರ ಇದು. ಮಾನ್ಯ ಮುಖ್ಯ ಮಂತ್ರಿಗಳು, ಮಾನ್ಯ ಗೃಹ ಮಂತ್ರಿಗಳು ಮತ್ತು ಸಚಿವರಾದ ಶ್ರೀ ರಾಜೂಗೌಡರವರೂ ಅಪರಾಧಿ ಸ್ಥಾನದಲ್ಲಿರುವವರು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ತನಿಖಾ ದಳದಿಂದ ನಾಗಪ್ಪನವರ ಹತ್ಯೆಯ ಸತ್ಯಾಂಶವನ್ನು ಹೊರಗಡೆ ತರುವುದಕ್ಕೆ ಚರ್ಚೆ ಆಗಬೇಕೆಂದು ನಿಲುವಳಿ ಸೂಚನೆಯನ್ನು ನಾವು ಕಳುಹಿಸಿದ್ದೇವೆ. ಇದು ಪ್ರಜಾಪ್ರಭುತ್ವದ ಪದ್ಧತಿ ಸರ್ಕಾರದ ತಪ್ಪು ಇದೆ, ಕೇಂದ್ರ ಸರ್ಕಾರದ ತಪ್ಪು ಇದೆ, ತಮಿಳುನಾಡು ಸರ್ಕಾರದ ತಪ್ಪು ಇದೆ, ಸತ್ಯ ಹೊರ ಬರಬೇಕು. ಅದಕ್ಕೋಸ್ಕರ ನಾವು ನಿಲುವಳಿ ಸೂಚನೆಯನ್ನು ತಂದಿದ್ದೇವೆ. ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಗೆ ತಾವು ಅವಕಾಶ ಮಾಡಿಕೊಡಬೇಕು. ಚರ್ಚೆ ಆಗಬೇಕು. ದಯವಿಟ್ಟು ತಾವು ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ನಾನು ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡಿ. ಶ್ರೀ ಶೆಟ್ಟರ್‌ರವರೇ ತಾವು ತಮ್ಮ ಸದಸ್ಯರುಗಳಿಗೆ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ಅಪರಾಧಿ ಸ್ಥಾನದಲ್ಲಿ ಸರ್ಕಾರ ನಿಂತಿದೆ. ಅವರ ಜೊತೆ ಏನು ಚರ್ಚೆ ಮಾಡುವುದು? ಇರುವುದನ್ನು ಮುಚ್ಚಿ ಹಾಕಿದ್ದಾರೆ. ನಾಗಪ್ಪನವರ ಹತ್ಯೆಗೆ ಈ

ಸರ್ಕಾರವೇ ಕಾರಣ. ಸರ್ಕಾರ ಅಪರಾಧಿ ಸ್ಥಾನದಲ್ಲಿದೆ. ಸರ್ಕಾರ ರಾಜೀನಾಮೆ ಕೊಡಬೇಕು. ಮುಖ್ಯ ಮಂತ್ರಿಗಳು ರಾಜೀನಾಮೆ ಕೊಡಲಿ. ಸರ್ಕಾರ ಹೋಗಬೇಕು.

ಅಧ್ಯಕ್ಷರು : ಶೆಟ್ಟರ್‌ರವರೇ, ನನಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮುಖ್ಯ ಮಂತ್ರಿಗಳು ರಾಜೀನಾಮೆ ಕೊಡಲಿ.

(ಗೊಂದಲ)

ಶ್ರೀ ಸಿ. ಬೈರೇಗೌಡ : ನಾವು ನಿಲುವಳಿ ಸೂಚನೆ ನೋಟಿಸ್ ಅನ್ನು ಕಳುಹಿಸಿದ್ದೇವೆ. ದಯವಿಟ್ಟು ಅದಕ್ಕೆ ಅವಕಾಶ ಮಾಡಿ ಕೊಡಿ.

(ಬಿಜೆಪಿ ಸದಸ್ಯರುಗಳಿಂದ ಸಿಬಿಐ ತನಿಖೆಗೆ ಒತ್ತಾಯಿಸಿ ಘೋಷಣೆ)

ಅಧ್ಯಕ್ಷರು : ಈ ರೀತಿ ಎಲ್ಲರೂ ಕೂಗಿದರೆ ಹೇಗೆ? ಯಾರಾದರೂ ಒಬ್ಬರೂ ಮಾತನಾಡಿ.

ಅಧ್ಯಕ್ಷರು : ಶೆಟ್ಟರ್‌ರವರೆ, ತಾವೊಬ್ಬರು ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ನಾಗಪ್ಪನವರನ್ನು ರಕ್ಷಣೆ ಮಾಡಲಿಕ್ಕೆ ಆಗಲಿಲ್ಲ. ನಾಗಪ್ಪನವರ ಹತ್ಯೆಗೆ ಸರ್ಕಾರವೇ ಕಾರಣ. ಮೊದಲು ರಾಜೀನಾಮೆ ಕೊಡಲಿ. ಸಿಬಿಐ ಎನ್‌ಕ್ವೈರಿ ಆಗಲಿ. ನಾಗಪ್ಪನವರ ಹತ್ಯೆಗೆ ಇವರೇ ಅಪರಾಧಿಗಳು. ಈ ಅಪರಾಧಿಗಳ ಮುಂದೆ ಏನು ಚರ್ಚೆ ಮಾಡುವುದಿದೆ? ಅಪರಾಧಿ ಸ್ಥಾನದಲ್ಲಿ ಇವ್ರೊತ್ತು ಸರ್ಕಾರ ನಿಂತಿದೆ. ನಾಗಪ್ಪನವರನ್ನು ರಕ್ಷಣೆ ಮಾಡಲಾಗದ ಸರ್ಕಾರ ಇದು. ನಾಗಪ್ಪನವರ ಹತ್ಯೆಗೆ ಇವರೇ ಕಾರಣ. ಈ ಸರ್ಕಾರ ಇದ್ರೂ ಅಷ್ಟೆ, ಬಿಟ್ರೂ ಅಷ್ಟೆ. ಈ ಸರ್ಕಾರ ಹೋಗಬೇಕು. ಬರಗಾಲ ಕಾಮಗಾರಿ ಕೈಗೊಳ್ಳಲಿಲ್ಲ. ಕಾವೇರಿ ನದಿ ವಿಚಾರದಲ್ಲಿ ಅನ್ಯಾಯ ಬಗರ್ ಹುಕುಂನಲ್ಲಿ ಅನ್ಯಾಯ. ಕರೀಂ ಲಾಲ ಹಗರಣದಲ್ಲಿ ಎಂಬತ್ತು ಸಾವಿರ ಕೋಟಿ ನಾಗಪ್ಪನವರಿಗೆ ರಕ್ಷಣೆ ಕೊಡಲಿಲ್ಲ. ನಾಗಪ್ಪನವರ ಹತ್ಯೆಯಾಗಿದ್ದಾಗ ಮುಖ್ಯಮಂತ್ರಿಗಳು ಎಲ್ಲಿದ್ರು? ನಾಗಪ್ಪನವರ ಹತ್ಯೆ ಆದಾಗ ಎಲ್ಲಿದ್ರು?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅದನ್ನೇ ಚರ್ಚೆ ಮಾಡಿ. ನೀವು ಹೇಳಿದ ವಿಚಾರವನ್ನೇ ಚರ್ಚೆ ಮಾಡಿ. ಸರ್ಕಾರ ಅದಕ್ಕೆ ಉತ್ತರ ಕೊಡಲು ರೆಡಿ ಇದೆ.

ಶ್ರೀ ಜಗದೀಶ್ ಶೆಟ್ಟರ್ : ಅಪರಾಧಿ ಸ್ಥಾನದಲ್ಲಿ ನಿಂತಿದ್ದಾರೆ ಅವರು ಸರ್ಕಾರ ಅಪರಾಧಿ ಸ್ಥಾನದಲ್ಲಿ ನಿಂತಿದೆ. ಮೊದಲು ರಾಜೀನಾಮೆ ಕೊಡಲಿ. ರಾಜೀನಾಮೆ ಕೊಡಲಿ. ಸಿಬಿಐ ಎನ್‌ಕ್ವೈರಿ ಮಾಡಲಿ ಫಸ್ಟ್ ಅವರು ರಾಜೀನಾಮೆ ಕೊಡಲಿ ಅಪರಾಧಿ ಸ್ಥಾನದಲ್ಲಿ ನಿಂತಿದ್ದಾರೆ. ನಾಗಪ್ಪನವರ ಹತ್ಯೆ ಮಾಡಿದ್ದಕ್ಕೆ ಇವರೇ ಕಾರಣ ಇವರು ಇಲ್ಲಿ ಕುಳಿತುಕೊಳ್ಳುವುದಕ್ಕೆ ನೈತಿಕ ಹಕ್ಕಿಲ್ಲ. ಇವರು ರಾಜೀನಾಮೆ ಕೊಟ್ಟು ಹೋಗಬೇಕು. ಇವ್ರೊತ್ತು ಸರ್ಕಾರ ಅಪರಾಧಿ ಸ್ಥಾನದಲ್ಲಿದೆ. ಸರ್ಕಾರ ಅಪರಾಧಿ ಸ್ಥಾನದಲ್ಲಿದೆ, ಸರ್ಕಾರದ ಜೊತೆ ಏನು ಚರ್ಚೆ? ಏನು ಉತ್ತರ ಕೊಡುತ್ತಾರೆ ಇವರು?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಈ ಸದನದಲ್ಲಿ ನಾಗಪ್ಪನವರ ಹತ್ಯೆ ಬಗ್ಗೆ ಮಾತನಾಡುವುದಕ್ಕೆ ನಿಮಗೆ ನೈತಿಕ ಹಕ್ಕಿಲ್ಲ. ಇವರು ಅಪರಾಧಿ ಸ್ಥಾನದಲ್ಲಿ ನಿಂತಿದ್ದಾರೆ.

Mr. Speaker : Very sorry, don't behave like this. ಏಕೆ ಈ ರೀತಿ ಮಾತನಾಡುತ್ತೀರಿ? I can't understand. Mr. Shetter, ನೀವೊಬ್ಬರು ಮಾತನಾಡಿ

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇವರು ಅಪರಾಧಿ ಸ್ಥಾನದಲ್ಲಿ ನಿಂತಿದ್ದಾರೆ. ಚರ್ಚೆ ಮಾಡುವಂಥ ಅವಶ್ಯಕತೆ ಏನಿದೆ? ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ಇವರಿಗೆ ನೈತಿಕ ಹಕ್ಕಿಲ್ಲ. ರಾಜೀನಾಮೆ ಕೊಟ್ಟು ಹೊರಗೆ ಹೋಗಬೇಕು. ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ಇವರಿಗೆ ಹಕ್ಕಿಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸದಸ್ಯರಾದ ಸಿಂಧ್ಯಾರವರು ಈಗ ಮಾತನಾಡುತ್ತಾರೆ. ಸಿಂಧ್ಯಾರವರೇ ಪ್ಲೀಸ್ ತಾವು ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಏಕೆ ಈ ವಿಚಾರ ಚರ್ಚೆ ಆಗಬಾರದು ಎಂದು ಹೇಳುತ್ತಿದ್ದಾರೆ ನನಗರ್ಥ ಆಗುತ್ತಿಲ್ಲ. ಏಕೆ ಸತ್ಯವನ್ನು ಮುಚ್ಚಿಡಬೇಕು? ಯಾರ್ಯಾರು ಏನೇನು ಮಾತನಾಡಿದ್ದಾರೆ ಎಂಬುದು ಗೊತ್ತಾಗಬೇಕು. ಅದಕ್ಕೋಸ್ಕರವೇ ನಮ್ಮ ಪಕ್ಷದ ವತಿಯಿಂದ ನಾವು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ದಯಮಾಡಿ ಚರ್ಚೆಗೆ ತಾವು ಅವಕಾಶ ಮಾಡಿಕೊಡಿ. ರೈತರ ಸಮಸ್ಯೆ ಬಗ್ಗೆಯೂ ಮಾತನಾಡಿ.

(ಗೊಂದಲ)

ಶ್ರೀ ಪಿ.ಜಿ.ಎಲ್. ಸಿಂಧ್ಯ : ಇದೆಲ್ಲ ಪ್ರಚಾರಕ್ಕೋಸ್ಕರ ಮಾಡುತ್ತಿರುವುದು. ನಾಗಪ್ಪನವರ ಆತ್ಮಕ್ಕೆ ಶಾಂತಿ ಸಿಕ್ಕುವುದಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ಇದರಲ್ಲಿ ಚರ್ಚೆ ಮಾಡುವುದಕ್ಕೆ ಏನುಂಟು? ಚರ್ಚೆ ಮಾಡುವುದಕ್ಕೆ ಇವರಿಗೆ ನೈತಿಕ ಹಕ್ಕಿಲ್ಲ. ಇವರು ರಾಜೀನಾಮೆ ಕೊಟ್ಟು ಹೋಗಬೇಕು.

ಅಧ್ಯಕ್ಷರು : ಒಂದ್ನಿಮಿಷ ಸುಮ್ನಿರಿ.

ಅಧ್ಯಕ್ಷರು : ಸ್ವಾಮಿ, ನೀವಾದರೂ ಮಾತನಾಡಿ ಅವರಾದರೂ ಮಾತನಾಡಲಿ. ಸಿಂಧ್ಯರವರು ನಿಲುವಳಿ ಸೂಚನೆ ಕಳುಹಿಸಿದ್ದಾರೆ.

(ಗೊಂದಲ)

ಅಧ್ಯಕ್ಷರು : ಅದು ಬೇರೆ ವಿಷಯ, ಸಿಂಧ್ಯರವರು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು : ನೀವು ಯಾರಾದರೂ ಒಬ್ಬರು ಮಾತನಾಡಿ ಈ ರೀತಿಯಾಗಿ ಅಡ್ಡಿ ಪಡಿಸಬೇಡಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಅವರು ಏನು ಹೇಳುತ್ತಾರೆ, ಹೇಳಲಿ. ಚರ್ಚೆಗೆ ಅವಕಾಶ ಮಾಡಿಕೊಡಿ. ನಾನು ಉತ್ತರ ಕೊಡುತ್ತೇನೆ. ಸಮಾಧಾನ ಇಲ್ಲ ಎಂದರೆ ಅವರು ಮತ್ತೆ ಏನು ಮಾಡುತ್ತಾರೆ ನೋಡೋಣ.

Mr. Speaker :- I have allowed him.

ಶ್ರೀ ಡಿ.ವಿ. ಸದಾನಂದಗೌಡ : ಈ ಸರ್ಕಾರ ಅಪರಾಧಿ ಸ್ಥಾನದಲ್ಲಿ ಇದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇವರು ಅಪರಾಧಿ ಸ್ಥಾನದಲ್ಲಿ ಇದ್ದಾರೆ, ಇವರ ಜೊತೆ ಚರ್ಚೆ ಮಾಡಿ ಏನೂ ಪ್ರಯೋಜನ ಇಲ್ಲ. ಮೊದಲು ರಾಜೀನಾಮೆ ಕೊಟ್ಟು ಹೋಗಲಿ. ಈಗ ಸಿಬಿಐ ತನಿಖೆಯಾಗಬೇಕು. ಸಿಬಿಐ ತನಿಖೆಗೆ ಒಪ್ಪಿಕೊಳ್ಳಲಿ ಅವರು. ರಾಜೀನಾಮೆ ಕೊಡಲಿ. ಮುಂದೆ ನಾವು ಚರ್ಚೆ ಮಾಡುತ್ತೇವೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಚರ್ಚೆ ಮಾಡುವುದಕ್ಕೆ ಹೇಳಿ. ಚರ್ಚೆ ಮಾಡಿದನಂತರ ನಾವು ಉತ್ತರ ಕೊಡುತ್ತೇವೆ ಹೀಗೆ ಕೂಗಾಡುವುದಕ್ಕೆ ಎಲ್ಲರಿಗೂ ಬರುತ್ತದೆ, ಅವರಿಗಿಂತ ಜೋರಾಗಿ ನಾವೂ ಕೂಗಬಹುದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಸಿಬಿಐ ತನಿಖೆಯಾಗಬೇಕು. ವೀರಪ್ಪನ್ ಹಿಡಿಯುವುದಕ್ಕೆ ಆಗಲಿಲ್ಲ ಇವರಿಗೆ. ನಾಗಪ್ಪನವರನ್ನು ಕೊಂದರು. ನಾಗಪ್ಪನವರನ್ನು ಹತ್ಯೆ ಮಾಡಿದವರನ್ನು ಹಾಗೆ ಬಿಡಬೇಡಿ. ಇವರ ಜೊತೆ ಏತಕ್ಕೆ ಮಾತನಾಡಬೇಕು?

(ಗೊಂದಲ)

ಅಧ್ಯಕ್ಷರು : ಈಗ ಸದನವನ್ನು ಅರ್ಧ ಗಂಟೆ ಕಾಲ ಮುಂದೂಡಲಾಗಿದೆ.

(ಸದನವು 11.24ಕ್ಕೆ ಮುಂದೂಡಲಪ್ಪಟ್ಟ ಪುನಃ ಅರ್ಧ ಗಂಟೆ ನಂತರ ಮತ್ತೆ ಸೇರಲು ನಿಶ್ಚಯಿಸಿತು)

(ಸದನವು ಪುನಃ 12 ಗಂಟೆ 55 ನಿಮಿಷಕ್ಕೆ ಪ್ರಾರಂಭವಾಯಿತು)

ಸನ್ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

(ಸದನದ ಬಾವಿಗೆ ಶ್ರೀ ಸಿ. ಗುರುಸ್ವಾಮಿಯವರು ಈ ಸಂದರ್ಭದಲ್ಲಿ ಬಂದರು)

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾಗಪ್ಪನವರ ಹತ್ಯೆಗೆ ಸರ್ಕಾರವೇ ಕಾರಣ.

(ಗೊಂದಲ)

Mr. Speaker : I feel sorry.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಈ ರೀತಿಯ ಸಂಸದೀಯ ನಡುವಳಿಕೆ, ಒಂದು ರಾಷ್ಟ್ರೀಯ ಪಕ್ಷದ ಘನತೆಗೆ ಯೋಗ್ಯ ತರತಕ್ಕಂಥದ್ದಲ್ಲ. ದಯಮಾಡಿ ಸದನವನ್ನು ಮುಂದೂಡಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಇವರಿಗೆ ಗುಜರಾತಿನ ಭೂತ ಹಿಡಿದಿದೆ.

Karnataka is not Gujarat.

ನಾವೇ ಇವರಿಗೆ ಭೂತ ಬಿಡಿಸಬೇಕು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇವರಿಗೆ ಈ ರೀತಿಯಾಗಿ ಮಾತನಾಡುವ ಅಧಿಕಾರವಿಲ್ಲ. ಇಲ್ಲಿ ಚರ್ಚೆ ಮಾಡುವುದಕ್ಕೆ ಅವರಿಗೆ ನೈತಿಕ ಹಕ್ಕಿಲ್ಲ.

(ಗೊಂದಲ)

ಅಧ್ಯಕ್ಷರು : ನಾನು ಮಾತನಾಡುವುದಕ್ಕೆ ಬಿಡಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಪ್ರವೃತ್ತಿಯನ್ನು ಖಂಡಿಸಬೇಕು.

(ಗೊಂದಲ)

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಮಾನ್ಯ ಚಂದ್ರೇಗೌಡರು ಉತ್ತರವನ್ನು ಕೊಡುತ್ತಾರೆ, ಆದ್ದರಿಂದ ತಾವು ದಯವಿಟ್ಟು ಅವಕಾಶವನ್ನು ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು : ಈಗ ಸದನವನ್ನು ಈ ದಿನದ ಮಟ್ಟಿಗೆ ಮುಂದೂಡುತ್ತಿದ್ದೇನೆ. ಸದನವು ಪುನಃ ದಿನಾಂಕ 26.12.2002 ರಂದು ಬೆಳಿಗ್ಗೆ 11-00 ಗಂಟೆಗೆ ಸೇರುತ್ತದೆ.

(ಸದನವು ಮಧ್ಯಾಹ್ನ 1 ಗಂಟೆ 2 ನಿಮಿಷಕ್ಕೆ ಮುಂದೂಡಲ್ಪಟ್ಟುಗೊಂಡು ಪುನಃ
ದಿನಾಂಕ 26ನೇ ಡಿಸೆಂಬರ್ ಮಾಹೆ 2002ರ
ಗುರುವಾರದಂದು ಬೆಳಿಗ್ಗೆ 11-00 ಗಂಟೆಗೆ
ಸೇರಲು ನಿಶ್ಚಯಿಸಿತು)

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)